## ಪಂಚಕ್ಷುದ್ರ ಶಕ್ತಿಗಳಿಗೆ ರಕ್ತತರ್ಪಣ

ಅದೊಂದು ಕುಗ್ರಾಮ. ಅದರ ಹೆಸರು ಸೋಲಿಗಪುರ. ನಾಗರಿಕತೆಯ ಸಂಪರ್ಕದಿಂದ ಬಹುದೂರ... ಬಹುದೂರವಿರುವ ಸಣ್ಣ ಗ್ರಾಮ. ಇಲ್ಲಿ ರುದ್ರ ರಮಣೀಯ ವೈಭವದಿಂದ ಪ್ರಕೃತಿ ಮೈತಳೆದು ವಿಜೃಂಭಿಸುತ್ತಿದ್ದಾಳೆ.

ಬೆಟ್ಟ, ಗುಡ್ಡ, ಕಾಡು, ಹರಿಯುವ ನದಿ, ಜಲಪಾತ... ಆಳವೇ ತಿಳಿಯದ ಕಂದರ. ಎತ್ತ ನೋಡಿದರೂ ಸಹ ಒತ್ತುಒತ್ತಾಗಿ ಬೆಳೆದುಕೊಂಡಿರುವ ಗಗನಚುಂಬಿ ವೃಕ್ಷಗಳು. ಸೂರ್ಯನ ಬೆಳಕು ಒಳಗೆ ಬರುತ್ತಿಲ್ಲ. ಆಗಸಕ್ಕೆ ಕೊಡೆ ಹಿಡಿದಂತೆ ಬೆಳೆದಿವೆ ಮರಗಳು. ಈ ಗ್ರಾಮದಲ್ಲಿ ಇನ್ನೂರು ಮನೆಗಳಿವೆ. ಗುಡ್ಡ ದಿಬ್ಬಗಳ ಮೇಲೆ ಸಹ ಮನೆಗಳಿವೆ. ಶೇ. ಅರವತ್ತು ಮಂದಿ ಅನಕ್ಷರಸ್ಥರು, ನಾಗರಿಕತೆಯ ಗಂಧ ತಿಳಿಯದವರು. ಇಂತಹ ಗ್ರಾಮದಲ್ಲಿಯೂ ಸಹ ನಗರದಲ್ಲಿ ಕಂಡುಬರುವ ಬಂಗಲೆ ತಲೆಯೆತ್ತಿದೆ. ಊರಿನ ಶ್ರೀಮಂತರಾದ ರಾಜಾರಾಯರ ಬಂಗಲೆ. ಕಾರು, ಬೈಕ್, ಜೀಪು ಮತ್ತು ಟ್ರ್ಯಾಕ್ಟರ್ ಸಹ ಇದೆ.

ಊರಿನಿಂದ ಎರಡು ಮೈಲಿ ದೂರದಲ್ಲಿ ದಕ್ಷಿಣಕ್ಕೆ ಇದೆ ಸ್ಮಶಾನ. ರಾತ್ರಿ ಹನ್ನೆರಡರ ಸಮಯ. ರಾತ್ರಿಯ ನೀರವತೆಯನ್ನು ಸೀಳಿಕೊಂಡು ತೇಲಿಬರುತ್ತಿದೆ ಮಂತ್ರ. ತ್ರಿಮಯ ಸ್ವರದ ಉಚ್ಚಾರಣೆ. ಸ್ವರದಲ್ಲಿ ಎನಿತು ಲೋಪವಿಲ್ಲ. ಮಹಾ ಕತ್ತಲಿನಲ್ಲಿ ಕಂಡುಬರುತ್ತಿದೆ ಉರಿಯುತ್ತಿರುವ ಚಿತೆ. ಅದೇ ಅಗ್ನಿಕುಂಡ. ಧಗಧಗನೆ ಬೆಂಕಿ ಉರಿಯುತ್ತಿದೆ. ಅಗ್ನಿಕುಂಡದ ಹತ್ತಿರ

